ಅ) 1990-91ನೇ ಸಾಲಿಗೆ ಎಷ್ಟು ಹರಿಜನ ಮತ್ತು ಗಿರಿಜನ ಬಸ್ತಿಗಳನ್ನು ವಿದ್ಯುದ್ದೀಕರಣ ಮಾಡುವ ಗುರಿಯನ್ನು ಮೂಡಿಗೆರೆ ತಾಲ್ಲೂಕಿನಲ್ಲಿ ಸರ್ಕಾರ ಉದ್ದೇಶಿಸಿತ್ತು?

ಆ) ಇವುಗಳಲ್ಲಿ ಎಷ್ಟನ್ನು ವಿದ್ಯುದ್ದೀಕರಣ ಮಾಡಲಾಗಿದೆ?

ಶ್ರೀ ಎಸ್. ಬಂಗಾರಪ್ಪ (ಮುಖ್ಯಮಂತ್ರಿಗಳು) :

ಅ) ಮಂಡಲಿಯು ಮೂಡಿಗೆರೆ ತಾಲ್ಲೂಕಿನಲ್ಲಿ 1990-91ನೇ ಸಾಲಿನಲ್ಲಿ 4 ಗಿರಿಜನ ಕಾಲೋನಿಗಳನ್ನು ವಿದ್ಯುದ್ದೀಕರಣ ಮಾಡುವ ಗುರಿಯನ್ನು ಹಾಕಿಕೊಂಡಿದೆ. ಆದರೆ ಹರಿಜನ ಬಸ್ತಿಗಳ ವಿದ್ಯುದ್ದೀಕರಣ ಮಾಡಲು ಗುರಿ ಹಾಕಿಕೊಂಡಿಲ್ಲ.

ಆ) 1990-91ನೇ ಸಾಲಿಗೆ ಹಾಕಿಕೊಂಡಿರುವ ಗುರಿಯಂತೆ ಜನವರಿ 1991ರ ಅಂತ್ಯದವರೆಗೆ ಮೂಡಿಗೆರೆ ತಾಲ್ಲೂಕಿನಲ್ಲಿ 4 ಗಿರಿಜನ ಕಾಲೋನಿಗಳನ್ನು ವಿದ್ಯುದ್ದೀಕರಣ ಮಾಡಿ ನಿಗದಿಪಡಿಸಿದ್ದ ಗುರಿಯನ್ನು ಸಾಧಿಸಲಾಗಿದೆ.

ಮೈಸೂರಿನ ಶ್ರೀ ಕೃಷ್ಣರಾಜೇಂದ್ರ ಮಿಲ್‌ನ್ನು ಪುನರಾರಂಭಿಸುವ ಬಗ್ಗೆ

234 - ಶ್ರೀ ಹರ್ಷಕುಮಾರ್ ಗೌಡ (ಚಾಮರಾಜ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೈಸೂರಿನ ಶ್ರೀ ಕೃಷ್ಣರಾಜೇಂದ್ರ ಮಿಲ್‌ನ್ನು ಪುನರಾರಂಭಿಸಲು ಸರ್ಕಾರವು ಕೈಗೊಂಡಿರುವ ಕ್ರಮವೇನು?

ಆ) ಯಾವಾಗ ತೆರೆಯಲಾಗುವುದು?

ಶ್ರೀ ಎಸ್. ಬಂಗಾರಪ್ಪ (ಮುಖ್ಯಮಂತ್ರಿಗಳು) :

ಅ) ರೋಗಗ್ರಸ್ತ ಕೈಗಾರಿಕೆಯಾದ ಶ್ರೀ ಕೃಷ್ಣರಾಜೇಂದ್ರ ಮಿಲ್‌ನ್ನು ಮುಚ್ಚಲು ಕೈಗಾರಿಕಾ ಮತ್ತು ಆರ್ಥಿಕ ಪುನರ್ ನಿರ್ಮಾಣ ಮಂಡಳಿಯು ಆದೇಶ ದಿನಾಂಕ 5.6.1989ರ ವಿರುದ್ಧ ಸದರಿ ಮಿಲ್ಲಿನ ಕಾರ್ಮಿಕ ಸಂಘವು ಮತ್ತು ಕೈಗಾರಿಕೋದ್ಯಮಿಯಾದ ಶ್ರೀ ಕೆ.ಆರ್. ಬಾಲಸುಬ್ರಮಣಿಯನ್ ಇವರುಗಳಿಂದ ಮೇಲ್ಮನವಿ ಪ್ರಾಧಿಕಾರದ ಮುಂದೆ ಸಲ್ಲಿಸಿರುವ ಮೇಲ್ಮನವಿ ಸಂಖ್ಯೆ 17-89 ವಿಲೇವಾರಿಯಾಗುವ ತನಕ ಸರ್ಕಾರದ ವತಿಯಿಂದ ಯಾವುದೇ ಕ್ರಮಕೈಗೊಳ್ಳಲು ಅವಕಾಶವಿರುವುದಿಲ್ಲ.

ಆ) ಕೈಗಾರಿಕಾ ಮತ್ತು ಆರ್ಥಿಕ ಪುನರ್ ನಿರ್ಮಾಣ ಮಂಡಳಿಯ ಮೇಲ್ಮನವಿ ಪ್ರಾಧಿಕಾರವು ವಿಷಯದ ಬಗ್ಗೆ ಅಂತಿಮ ಆದೇಶವನ್ನು ಹೊರಡಿಸುವ ತನಕ ರೋಗಗ್ರಸ್ತ ಕೈಗಾರಿಕೆಯಾದ ಇದನ್ನು ಯಾವಾಗ ಪುನರ್ ಆರಂಭಿಸಲಾಗುವುದೆಂದು ನಿರ್ದಿಷ್ಟವಾಗಿ ತಿಳಿಸಲು ಸಾಧ್ಯವಿರುವುದಿಲ್ಲ.

ರಾಜ್ಯದಲ್ಲಿ ಸ್ವಯಂ ಉದ್ಯೋಗದ ಯೋಜನೆಯಲ್ಲಿ ಲಾಭ ಪಡೆದಿರುವ ಯುವಕರ ಸಂಖ್ಯೆಯ ಬಗ್ಗೆ.

623 - ಶ್ರೀ ಕೆ. ಹರ್ಷಕುಮಾರ್ ಗೌಡ (ಚಾಮರಾಜ) : ಮಾನ್ಯ ಸಣ್ಣ ಕೈಗಾರಿಕೆಗಳ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಸ್ವಯಂ ಉದ್ಯೋಗದ ಯೋಜನೆಯಡಿಯಲ್ಲಿ ಪ್ರತಿ ವರ್ಷ ಎಷ್ಟು ಜನ ಯುವಕರಿಗೆ ಉದ್ಯೋಗ ಒದಗಿಸಲಾಗಿದೆ?

ಆ) ಈ ಯೋಜನೆಗೆ ಪ್ರತಿ ವರ್ಷ ಬಿಡುಗಡೆ ಮಾಡುತ್ತಿರುವ ಹಣದ ಪ್ರಮಾಣವೆಷ್ಟು?

ಇ) ಸ್ವಯಂ ಉದ್ಯೋಗಾಭ್ಯರ್ಥಿಗಳಿಗೆ ಈ ಯೋಜನೆಯ ಫಲ ದೊರಕಲು ಆಯ್ಕೆ ಸಮಿತಿಗಳಲ್ಲಿ ಅಧಿಕಾರೇತರರಿಗೆ ಅವಕಾಶ ಇದೆಯೇ?

ಈ) ಮೈಸೂರು ಜಿಲ್ಲೆಯಲ್ಲಿ ಈ ಯೋಜನೆಯಡಿಯಲ್ಲಿ ಸ್ವಯಂ ಉದ್ಯೋಗಿಗಾಳಾಗಿರುವ ಯುವಕರ ಸಂಖ್ಯೆ ಎಷ್ಟು?

ಶ್ರೀ ನಜೀರ್ ಅಹಮ್ಮದ್ (ಸಣ್ಣ ಕೈಗಾರಿಕೆಗಳ ರಾಜ್ಯ ಮಂತ್ರಿಗಳು) :

ಅ) ಈ ಯೋಜನೆಯು 1983-84ರಿಂದ ಕರ್ನಾಟಕದಲ್ಲಿ ಜಾರಿಗೆ ಬಂದಿರುತ್ತದೆ. 83.84ರಿಂದ 89-90ರವರೆಗೆ ಒಟ್ಟು 72,824 ಫಲಾನುಭವಿಗಳಿಗೆ ಸಾಲ ಸೌಲಭ್ಯವನ್ನು ಒದಗಿಸಲಾಗಿದೆ. ವರ್ಷವಾರು ಸಾಲ ಸೌಲಭ್ಯಗಳನ್ನು ಪಡೆದ ಫಲಾನುಭವಿಗಳ ಸಂಖ್ಯೆ ಈ ಕೆಳಕಂಡಂತೆ ಇರುತ್ತದೆ.

1983-84	12,307
1984-85	12,810
1985-86	12,837
1986-87	12,100
1987-88	6,175
1988-89	10,585
1989-90	6,010
ಒಟ್ಟು	72,824

ಆ) ವರ್ಷವಾರು ಬಿಡುಗಡೆ ಮಾಡಿದ ವಿವರಗಳು ಈ ಕೆಳಕಂಡಂತೆ ಇವೆ.

		ಕೈಗಾರಿಕೆ ರೂ. (ಲಕ್ಷಗಳು)	ಸೇವಾ ಕೈಗಾರಿಕಾ ರೂ.	ವ್ಯಾಪಾರ ರೂ	ಒಟ್ಟು ರೂ (ಲಕ್ಷಗಳು)
1	1983-84	-	-	-	1,960-00
2.	1984-85	1,178-00	717-00	484-00	2,379-00
3.	1985-86	1,107-00	600-00	800-00	2,507-00
4.	1986-87	1,214-00	658-00	523-00	2,395-00
5.	1987-88	627-28	320-45	295-24	1,242-97
6.	1988-89	852-64	566-39	620-36	2,089-39
7.	1989-90	495-43	344-00	341-70	1,181-13
ಒಟ್ಟು		5,474-35	3,206-94	3,064-30	13,704-49

ಇ) ಅಧಿಕಾರೇತರರಿಗೆ ಆಯ್ಕೆ ಸಮಿತಿಯಲ್ಲಿ ಅವಕಾಶವಿರುವುದಿಲ್ಲ.

ಈ) ಮೈಸೂರು ಜಿಲ್ಲೆಯಲ್ಲಿ 1983-84 ರಿಂದ 1989-90 ರವರೆಗೆ ಸ್ವಯಂ ಉದ್ಯೋಗಿಗಳಾಗಿರುವ ಸಂಖ್ಯೆ ಒಟ್ಟು 4900.ವರ್ಷವಾರು ವಿವರಗಳು ಈ ಕೆಳಕಂಡಂತಿವೆ.

1983-84	944
1984-85	894
1985-86	881
1986-87	830
1987-88	351
1988-89	751
1989-90	349
ಒಟ್ಟು	4900